**ಸಾಕ್ಷಿ ಯನ್ನು ದಿಃ 28.07.2026ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ವೈ ಡಿ ಎಸ್ ವಕೀಲರಿಂದ:**

ಸಾಕ್ಷಿ ಇಂದು ಕಟ್ಟೆಯಲ್ಲಿ ನಿಂತು ತಮ್ಮ ಮುಖ್ಯ ವಿಚಾರಣೆಯ ಭಾಗವಾಗಿ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ ಹಾಗೂ ಅದರಲ್ಲಿ ಬರೆದಿರುವ ಅಂಶಗಳೆಲ್ಲವೂ ಸತ್ಯವಾಗಿರುತ್ತವೆ ಹಾಗೂ ಅದರಲ್ಲಿರುವ ಸಹಿ ತನ್ನದೇ ಎಂದು ಹೇಳಿರುತ್ತಾರೆ.

**ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆಃ**

1. ವಾದಿ ನೀಡಿದ ಅಧಿಕಾರ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು **ನಿಪಿ.1** ಎಂದು ಗುರುತಿಸಲಾಗಿದೆ.

2. ಸರ್ವೆ ನಂ.57/6ರ ಎರಡು ಪುಟಗಳ ಕೈಬರಹದ ಪಹಣಿಗಳ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು **ನಿಪಿ. 2** ಎಂದು ಗುರುತಿಸಲಾಯಿತು.

3. ದಿನಾಂಕ 03.07.1976ರ ಮೂಲ ಕ್ರಯ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು **ನಿಪಿ.3** ಎಂದು ಗುರುತಿಸಲಾಗಿದೆ.

4. ದಿನಾಂಕ 05.05.1975 ರ ಎರಡು ಮೂಲ ಕ್ರಯ ಪತ್ರಗಳನ್ನು ಹಾಜರುಪಡಿಸಿದ್ದು, ಅವುಗಳನ್ನು **ನಿಪಿ.4** ಮತ್ತು ನಿಪಿ.5 ಎಂದು ಗುರುತಿಸಲಾಗಿದೆ.

5. ಎಂ ಆರ್ 21/85-86ರ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು **ನಿಪಿ.6** ಎಂದು ಗುರುತಿಸಲಾಯಿತು.

6. ಒಂದು ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು **ನಿಪಿ.7** ಎಂದು ಗುರುತಿಸಲಾಗಿದೆ.

7. ಎಂ ಆರ್ ಹೆಚ್ 26/2020-21ರ ಸಾಲಿನ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು **ನಿಪಿ.8** ಎಂದು ಗುರುತಿಸಲಾಯಿತು.

8. ಸರ್ವೆ ನಂ.57/6ರ ಪಹಣಿಯನ್ನು ಹಾಜರುಪಡಿಸಿದ್ದು, ಅದನ್ನು **ನಿಪಿ.9** ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.**

*( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್.